ಒಂದಲ್ಲ... ಎರಡಲ್ಲ... ಎಷ್ಟು ಬಗ್ಗೆ!... ನೃತ್ಯಗಳು ಸಿನಿಮಾ ಹಾಡುಗಳು... ಅಬ್ಬ ಕಾಮ, ಸಂಗ ಅಂದರೆ ಅಸಹ್ಯ ಹುಟ್ಟಿಸುವಂಥ ನೃತ್ಯಗಳು ಅಸಹ್ಯವೆಂದು ಕೊಂಡರೂ ಮೈ ಪುಲಕಗೊಂಡಿತ್ತು. ಆದರೆ.. ನನ್ನ ಹಿಡಿದು ಅಪ್ಪಿ ಮಧುರ ಮಾತಾಡಿ ತಣಿಸುವ ಜೀವ ಇಲ್ಲ... ಪುಲಕಗೊಳ್ಳುವುದು.. ಸಹಜ ಆದರೆ ತಣಿಯುವುದು ಗಂಡಸಿಗೆ ಮಾತ್ರವೇ?.. ದೇಹ ಸಂಪರ್ಕದಲ್ಲಿ ಹೆಣ್ಣಿಗೆ ನೋವಷ್ಟೆಯೇ...? ಸುಖವಿಲ್ಲವೇ?... ಗೊತ್ತಿಲ್ಲ.. ನನಗಂತೂ ಇಲ್ಲ... ಅಥವಾ ಮನಸ್ಸಿಗೆ ಸಮಾಧಾನವಿಲ್ಲದ ಕಾರಣ ಸುಖವಿಲ್ಲವೇನೋ ಬರೀ ದೈಹಿಕವೇ ಆದರೆ ಕ್ರಿಯೆ ಆದಾಗ ಸುಖವಿರಬೇಕಲ್ಲವೇ?... ಅಥವಾ.. ಗಂಡು ಸುಖಿಸಿದಾಗ ಆಗುವ ತೃಪ್ತಿಯೇ.. ಸುಖವೇನೋ.. ನನ್ನಿಂದ ಅವನು ತಣಿದ ಎಂಬುದೇ ಸುಖವೇನೋ.. ಹುಚ್ಚು ಮನಸ್ಸು... ಕಡಿವಾಣವಿಲ್ಲದೆ ಓಡಿದ ರೀತಿಗೆ ನನಗೇ ನಾಚಿಕೆಯಾಯಿತು...

ಎರಡು ಮುದ್ದಾದ ಮಕ್ಕಳ ತಾಯಿ... ಮೂವತ್ತು ನಾಲ್ಕು ತುಂಬಿದ ಮಹಿಳೆ ಯೋಚಿಸುವ ರೀತಿಯೇ ಇದು...?... ಎದ್ದು ನೀರು ಕುಡಿದು, ಬಚ್ಚಲಿಗೆ ಹೋಗಿ ಕಾಲು ತೊಳೆದುಕೊಂಡು ಬಂದು ಹೊದ್ದು ಮಲಗಿದೆ.

ಕಣ್ಣು ಮುಚ್ಚಿದರೆ ನಿದ್ದೆ ಬರುತ್ತದೆ ಎಂದು ಅಜ್ಜಿ ಹೇಳುವುದನ್ನು ನೆನೆಸಿ ಕೊಂಡು ಭದ್ರವಾಗಿ ಕಣ್ಣುಮುಚ್ಚಿದೆ. ಎಚ್ಚರವಾದಾಗ ಸೂರ್ಯನ ಕಿರಣಗಳು ನುಗ್ಗಿ ಕೋಣೆಯನ್ನು ಬೆಳಕಾಗಿಸಿತ್ತು.. ಕಣ್ಣು ಬಿಡುವುದೇ ಕಷ್ಟವಾಯಿತು.. ಆ ಬೆಳಕಿಗೆ. ತಲೆ ಬೇರೆ ಸಿಡಿಯುತ್ತಿತ್ತು. ಆದರೂ ಬಲವಂತವಾಗಿ ಮಂಚದಿಂದ ಇಳಿದೆ. ಸೀರೆ, ಕೂದಲು ಸರಿ ಮಾಡಿಕೊಂಡು.. ಎದುರು ಗೋಡೆಗಿದ್ದ ಗಡಿಯಾರದತ್ತ ನೋಡಿದೆ. ಎಂಟೂವರೆ!.  ಎಂಟೂವರೆಯೇ?

ಗಡಬಡಿಸಿ ಆಚೆ ಬಂದೆ. ಸೀದಾ ಅಡಿಗೆ ಮನೆಗೆ ನಡೆದೆ. ರತ್ನಮ್ಮ ನನ್ನತ್ತ ತಿರುಗಿದರು.

ಕಾಫಿ ಕೊಡ್ಲಾ?

ಬೇಡ

ಮಕ್ಕಳು ತಿಂಡಿ ತಿಂದು, ಹಾಲು ಕುಡಿದರು.. ಆಗಲೇ ಹೊರಟರು... ಯಾಕೆ.. ನೀವು... ಏನಿಲ್ಲ...

ಸಿಂಕಿನಲ್ಲಿದ್ದ ಲೋಟಗಳನ್ನು ತೊಳೆಯಲಾರಂಭಿಸಿದರು.

ಅಡಿಗೆ ಮನೇಲಿ ತೊಳಿಬೇಡಿ ರತ್ನಮ್ಮ... ಹೊರಗೆ ತೊಗೊಂಡು ಹೋಗಿ...

ಬಾಗಿಲ ಬಳಿ ಹೋದವಳು ಹಾಗೇ ತಿರುಗಿ ಹೇಳಿದೆ.

ಎಷ್ಟು ಬಾರಿ ಹೇಳಿದೀನಿ.. ಇಲ್ಲೇ ಲೋಟಗಳ್ನ ತೊಳಿಬೇಡಿ ಅಂತ...

ನೀವು ಹೀಗೆ ಹೇಳ್ತೀರಾ... ಲೋಟ, ಸ್ಪೂನು ಎಲ್ಲಾ ಆಚೆ ಹಾಕಬೇಡ.. ಇಲ್ಲಿ ಇಷ್ಟು ದೊಡ್ಡ ಸಿಂಕಿದೆ. ಇಲ್ಲೇ ಗಲಬರಿಸಿ ಇಡೋಕ್ಕೆ ಆಗಲ್ವೆ ಅಂತ ನಿಮ್ಮ ಅತ್ತೆಯವರು ಹೇಳ್ತಾರೆ. ಮೊದ್ಲು ನಾನು ಏನು ಮಾಡಬೇಕು ಅಂತ ನೀವಿಬ್ಬರೂ ಅತ್ತೆ ಸೊಸೆ ಮಾತಾಡಿಕೊಂಡು ನಿರ್ಧರಿಸಿ.. ಆಮೇಲೆ ನಂಗೆ ಹೇಳಿ...

ಉಗುಳು ನುಂಗಿ ಮೌನದ ಮೊರೆ ಹೊಕ್ಕೆ. ಜೋರಾಗಿ ಬಿಟ್ಟಿದ್ದ ನೀರು, ಲೋಟ, ಕೈಯಿ ಅಡ್ಡ ಬರುತ್ತಿತ್ತು.. ನೀರು ಎಗರಿ ಕಟ್ಟೆಯ ಮೇಲೆ, ನೆಲದ ಮೇಲೆ, ನಲ್ಲಿಯ ಹಿಂದಿದ್ದ ಟೈಲ್ಸಿನ ಮೇಲೆಲ್ಲಾ ಹನಿಹನಿಯಾಗಿ ನಿಂತಿತ್ತು.. ಕಣ್ಣಿಂದ ಹೊಮ್ಮುವ ನೀರ ಹನಿ ಕೆನ್ನೆಯ ಮೇಲೆ ಜಾರುವಂತೆ. ಟೈಲಿನ ಮೇಲೆ ನಿಂತ ಹನಿ.. ಜಾರುತ್ತಿತ್ತು.

ನಿಧಾನವಾಗಿ ಆಚೆ ಹೊರಬಾಗಿಲ ಬಳಿ ಬಂದೆ. ಒಳಬರುತ್ತಿದ್ದ ಅತ್ತೆ ನಿಂತು ನನ್ನತ್ತ ದೀರ್ಘವಾಗಿ ನೋಡಿದರು.

ಮಕ್ಕಳು ಶಾಲೆಗೆ ಹೋಗಿ ಆಯ್ತು

ಹೂಂ..

ನಾನೇ ಸಿದ್ಧಮಾಡಿ ಕಳುಹಿಸಿದೆ.

ಹಾಂ..

ನೀನು ಮಹಾರಾಣಿಯಂತೆ ಈಗ ಎದ್ದು ಬರ್ತಾ ಇದಿಯಲ್ಲ.. ಜವಾಬ್ದಾರಿ ಬೇಡವೇ ನಿನ್ನ ಮಕ್ಕಳು..

ನನ್ನ ಮಕ್ಕಳು!... ಆದರೆ....ಯಾಕೋ ಮಾತೇ ಬೇಡವೆನ್ನಿಸಿತು. ಅಲ್ಲಿದ್ದ ಅಂದಿನ ಪೇಪರ್ ಕೈಗೆತ್ತಿಕೊಂಡೆ ಸಿಡಿಯುತ್ತಿರುವ ತಲೆನೋವು ಬರಿಯ ಕಾಫಿಗೆ ಹೋಗುತ್ತದೆಯೇ?...

ಹೇಳು.... ಆದರೆ..ಏನು?.. ಸೊಂಟದ ಮೇಲೆ ಕೈ ಇಟ್ಟು ನಿಂತ ಅತ್ತೆಯತ್ತ ತಿರುಗಿದೆ.

ಬಿಡಿ ಅತ್ತೆ ಮಾತು ಏಕೆ?...ಯಾವುದೂ ಹೊಸತಿಲ್ಲ. ನಿಮ್ಮ ಮೊಮ್ಮಕ್ಕಳಿಗೆ ನೀವು ಮಾಡ್ತೀರಿ. ಅವರಿಬ್ಬರ ಜವಾಬ್ದಾರಿ ನಿಮ್ಮದೇ... ನಾನು...

ಅಯ್ಯೋ ನನ್ನ ಅನ್ನಬೇಡ. ಜವಾಬ್ದಾರಿ ತೊಗೋ ಯಾರು ಬೇಡ ಅಂದೋರು? ತಾಯಿ ನೀನು..

ಇರ್ಲಿ ಬಿಡಿ. ನಂಗೇನು ಬೇಸರವಿಲ್ಲ.. ಅಷ್ಟಕ್ಕೂ ನಾನು ಎದ್ದು ಬಂದರೂ ನೀವು ಹೇಳುವ ಒಂದೆರಡು ಕೆಲಸ ಮಾಡಬೇಕಷ್ಟೇ. ನಿತ್ಯ ಎದ್ದು ಬಂದು ಮಾಡ್ತೀನಲ್ವಾ?... ಇವತ್ತೊಂದು ದಿನ ಬರಲಿಲ್ಲ.. ಅದಕ್ಕೆ ಜವಾಬ್ದಾರಿಯೇ ಇಲ್ಲ ಅಂದು ಬಿಟ್ರಲ್ಲ.. ಯಾಕೆ ಬರಲಿಲ್ಲ? ಹುಷಾರಿಲ್ಲವೇ? ಏನಾಯ್ತು? ಎಂದು ವಿಚಾರಿಸಬೇಕು ಅಂತ ಅನ್ನಿಸಲಿಲ್ಲವೇ? ಕಾಳಜಿಯೇ ಇಲ್ಲವೇ? ಯಾಕೆ ಏಳಲಿಲ್ಲ.. ಎಂಬ ಧಾವಂತವಿಲ್ಲ...

'ಯಾಕತ್ತೆ? ಹದಿನಾಲ್ಕು ವರ್ಷದಿಂದ ಈ ಮನೆಯಲ್ಲಿ ಇದೀನಲ್ಲ... ಈ ಮನೆಯ ಸೊಸೆಯಾಗಿ, ನಿಮಗೆ ಯಾಕೆ ಕಾಳಜಿಯಿಲ್ಲ?.. ನಾಲ್ಕು ಜನರಲ್ಲಿ..... ಸೊಸೆಯೇ ನನ್ನ ಮಗಳು ಅಂತ ಹೇಳಿರಲಿಲ್ಲವೇ? ನಿಮ್ಮ ಮಗನ ಪತ್ನಿಯಾಗಿ, ನಿಮ್ಮ ಮುದ್ದು ಮೊಮ್ಮಕ್ಕಳ ತಾಯಿಯಾಗಿ... ಆದರೂ.. ಆದರೂ ಯಾಕೆ ಬಂಧ ಬೆಳೆಯಲ್ಲೇ ಇಲ್ಲ?' ಅತ್ತೆ ಸುಮ್ಮನೆ ನಿಂತರು.

ನಾನು ಇಷ್ಟೊಂದು ಸ್ಪಷ್ಟವಾಗಿ ನನ್ನ ಮನದಾಳದ ಅಳಲನ್ನು ಹೇಳಿಕೊಳ್ಳಬಲ್ಲೆ ಎಂದು ನನಗೇ ಅನ್ನಿಸಿರಲಿಲ್ಲ.. ಬೆಳೆಯದ ಬಂಧದ ಬಗ್ಗೆ, ಮೂಡದ ಪ್ರೀತಿ, ವಾತ್ಸಲ್ಯದ ಬಗ್ಗೆ ಇಷ್ಟೊಂದು ಅಳಲಿದೆಯೇ ನನ್ನಲ್ಲಿ?... ನನಗೇ ಅರಿವಿರಲ್ಲಿಲ್ಲ.

ಪ್ರೀತಿ ಕೊಟ್ಟು ಪ್ರೀತಿ ಪಡಿ ಅಂತಾರೆ. ನಾನು ಪ್ರೀತಿ ಕೊಟ್ಟಿಲ್ಲೇ? ಅಜ್ಜಿ, ತಾತ, ಅತ್ತೆ, ಮಾವ ಎಂದು ಸೇವೆ ಮಾಡಿಲ್ಲವೇ? ಪ್ರೀತಿ, ವಿಶ್ವಾಸ ತೋರಿಲ್ಲವೇ?.... ಮೂರು ವರ್ಷದ ಹಿಂದೆ ಜಾಂಡೀಸ್ ಆಗಿ ಅತ್ತೆ ಮೂರು ತಿಂಗಳು ಹಾಸಿಗೆ ಹಿಡಿದಾಗ ಆರೈಕೆ ಮಾಡಿದ್ದು. ಯಾರು? ತಾತ ಕೊನೆಗಾಲದಲ್ಲಿ ಎರಡು ವರ್ಷ ಹಾಸಿಗೆ ಹಿಡಿದಾಗ ಆರೈಕೆ ಮಾಡಿದ್ದು ಯಾರು.....?

ನನ್ನ ಮನೆ, ನನ್ನವರು ಎಂದು ನಾನು ಏನೂ ಮಾಡೇ ಇಲ್ಲವೇ?... ಅಥವಾ ಮಾಡಿದ್ದು ಕಡಿಮೆಯೇ...? ಇನ್ನೇನು ಮಾಡಬೇಕಿತ್ತು...? ನನ್ನ ಬಗ್ಗೆ ಕಾಳಜಿಯೇ ಇಲ್ಲವೇ ಯಾಕೋ ದು:ಖ ಒತ್ತರಿಸಿಕೊಂಡು ಬಂತು.

ಹೆತ್ತ ಮಕ್ಕಳಿಗೆ ಕೂಡ ಅಮ್ಮನಿಗೆ ಟಾಟಾ ಹೇಳಬೇಕು.. ಶಾಲೆಗೆ ಹೋಗುವ ಮುನ್ನ ಅಂತ ಅನ್ನಿಸಲಿಲ್ಲಲ್ಲವೇ?... ಅಮ್ಮ ಎದ್ದು ಬರಲಿಲ್ಲವಲ್ಲ ಅವಳಿಗೆ ಏನಾಗಿದೆಯೇ ಎಂದು ಅನ್ನಿಸಲ್ಲಿಲವೇ?

ನಾನು ಚಿಕ್ಕವಳಿದ್ದಾಗ ಎದ್ದ ತಕ್ಷಣ ಅಮ್ಮ ಕಾಣಿಸದಿದ್ದರೆ.. ಅವಳು ಸತ್ತೇ ಹೋದಳೇನೋ ಎಂದು ಭೀತಿಯಾಗುತ್ತಿತ್ತು.. ಅಮ್ಮ, ಅಮ್ಮ ಎಂದು ಕೂಗಿ ಅವಳು ಓ್ಂ.. ಏಳೇ ಸೋಮಾರಿ ಎಂದು ಒಳಗೆ ಎಲ್ಲಿಂದಲೋ ಗದರಿದ್ದಾಗ ಹೊದ್ದಿಕೆ ಸರಿಸಿ ಹಾಸಿಗೆಯಿಂದ ಮೇಲೇಳುತ್ತಿದ್ದೆ.

ಆದರೆ ನನ್ನ ಮಕ್ಕಳು... ಯಾರಿಗೆ ನಾನೇನು ಕಮ್ಮಿ ಮಾಡಿದ್ದೇನೆ?.. ಯಾಕೆ ಎಲ್ಲರೂ ಹೀಗೆ?... ನಾನು.... ಕಂಬನಿ ತುಂಬಿದ ಕಂಗಳಿಂದ ಕತ್ತೆತ್ತಿ ನೋಡಿದಾಗ ಅತ್ತೆ ಅಚ್ಚರಿಯಿಂದ ನನ್ನತ್ತ ನೋಡುತ್ತಿದ್ದರು.

ಪೇಪರ್ ಓದುತ್ತಾ ಕುಳಿತಿದ್ದ ಮಾವನವರು ತಲೆಯೇ ಎತ್ತಿರಲಿಲ್ಲ.

ಹೋಗಿ ಮುಖ ತೊಳೆದುಕೊಂಡು ಕಾಫಿ ಕುಡಿ... ಬಂಧ, ಸಂಬಂಧ, ಯಾಕೆ ಬೆಳೆದಿಲ್ಲ ಅಂದ್ರೆ ಏನು?...ಅದೇನು ಗಿಡವೇ? ಮರವೇ? ಸಂಬಂಧ ಇದೆ. ಅಷ್ಟೇ, ನಾನಿಲ್ಲ ಅಂದರೆ ಸಂಬಂಧ ಇಲ್ಲದೆ ಹೋಗುತ್ತದೆಯೇ?.... ನಾನು ಅತ್ತೆ ನೀನು ಸೊಸೆ... ಬೇಡ ಅಂದ್ರು ಅಷ್ಟೇ. ಬೇಕು ಅಂದ್ರೆ ಅಷ್ಟೇ.. ರಾತ್ರಿಯೆಲ್ಲಾ ನಿದ್ದೆಗೆಟ್ಟು ಏನೇನೋ ಪುಸ್ತಕ ಓದೋದು, ಅಸಂಬದ್ಧ ಮಾತಾಡೋದು... ಇವತ್ತು ತದಿಗೆ.. ಒಂದು ಚೊಂಬು ನೀರು ಹಾಕಿಕೊಂಡು ಗೌರಿ ಪೂಜೆ ಮಾಡಬೇಕು.. ನಂದು ಪೂಜೆ ಆಯ್ತು. ನೀನು ನೈವೇದ್ಯಕ್ಕೆ ಶಾವಿಗೆ ಪಾಯಸ ಮಾಡಿಕೊಂಡು ಪೂಜೆ ಮಾಡು... ತದಿಗೆ ಗೌರಿ ಪೂಜೆ ಬೆಳಗಿನ ಜಾವವೇ ಮಾಡಬೇಕು... ಎಷ್ಟು ವರ್ಷ ಆದರೂ ಹೇಳ್ತಾನೇ ಇರಬೇಕು ಅಂದ್ರೆ ಹೇಗೆ?... ಅತ್ತೆ ಉದ್ದಕ್ಕೆ ಹೇಳುತ್ತಾ ಅಡಿಗೆ ಮನೆಯತ್ತ ನಡೆದರು. ನಾನು ನಿಂತಲ್ಲೇ ನಿಂತೆ.

ಯಾವ ಸೌಭಾಗ್ಯಕ್ಕೆ ಗೌರಿ ಪೂಜೆ ಮಾಡಬೇಕು..?.. ಗಂಡ ಚೆನ್ನಾಗಿರಲಿ ಎಂದು.. ಗಂಡ ಚೆನ್ನಾಗಿದ್ದರೆ ನಾನೂ ಚೆನ್ನಾಗಿರುತ್ತೇನೆ, ಸುಖವಾಗಿರುತ್ತೇನೆ. ಎಂಬ ಸ್ವಾರ್ಥವೂ ಪೂಜೆಯಲ್ಲಿ ಸೇರಿರುತ್ತದೆ. ಆದರೆ ನನ್ನ ವಿಷಯದಲ್ಲಿ ಹಾಗಲ್ಲ... ಅವರ ಸುಖ, ಸಂತೋಷ, ಆಸೆಗಳು ಅವರನ್ನು ನನ್ನಿಂದ ಮತ್ತಷ್ಟು ದೂರ ಕರೆದೊಯ್ಯುತ್ತವೆ. ನಾನು ಒಂಟಿ.. ಹಾಗೆಂದು ಪೂಜೆ ಮಾಡದೆ ಇದ್ದರೆ